# ಆಧುನಿಕ ಬದುಕಿನ ತೊಂದರೆಗಳನ್ನು ಪರಿಹರಿಸಲು ಯತ್ನಿಸುತ್ತಿರುವ ಅರ್ಥ್

ಬೆಂಗಳೂರು, ಜ. 30: ಆಧುನಿಕ ಬದುಕಿನ ಹಿನ್ನೆಲೆಯಲ್ಲಿ ಇಂದಿನ ನಾಗರಿಕರಿಗೆ ಒತ್ತಡ ಅನಿವಾರ್ಯವಾಗಿದೆ. ಜೀವನದ ವಿವಿಧ ಒತ್ತಡಗಳಲ್ಲಿ ಸಿಲುಕಿದ ನಗರಗಳ ಅನೇಕ ಮಧ್ಯಮ ವರ್ಗದವರು ಮಾನಸಿಕವಾಗಿ ತೊಂದರೆಗೆ ಒಳಗಾಗುವುದಲ್ಲದೇ, ಇದರಿಂದ ಹಲವಾರು ರೋಗಗಳಿಗೆ ತುತ್ತಾಗುತ್ತಿದ್ದಾರ. ಈ ರೀತಿಯ ಆಧುನಿಕ ಬದುಕಿನ ಹಲವಾರು ತೊಂದರೆಗಳಿಗೆ ಪರಿಹಾರ ನೀಡಲು `ಅರ್ಥ್' ಸಂಸ್ಥೆ ಪ್ರಯತ್ನಿಸುತ್ತಿದೆ.

ಹಲವಾರು ಪರೀಕ್ಷಿಸಿದ ವೈದ್ಯಕೀಯ ವಿಧಗಳಾದ ಆಯುರ್ವೇದ, ಆಕ್ಯು ಪ್ರೆಶರ್, ಅರೋಮ ಥೆರಪಿ(ಸುಗಂಧ ಚಿಕಿತ್ಸೆ), ಧ್ಯಾನ ಮತ್ತು ಪ್ರಾಕೃತಿಕ ಚಿಕಿತ್ಸೆ ಅಲ್ಲದೇ ಸಮ್ಮೋಹನ ಚಿಕಿತ್ಸೆ, ರೀಕಿ, ಸಂಗೀತ ಚಿಕಿತ್ಸೆಗಳನ್ನು ಒಂದೆಡೆ ಸೇರಿಸಿ ಆಧುನಿಕ ಮಾನವನ ತೊಂದರೆಗಳಿಗೆ ಸಹಾಯ ನೀಡುವ ಉದ್ದೇಶದಿಂದ ಆತ್ರೇಯ ರಿಸಾರ್ಟ್ಸ್ ಫಾರ್ ಟ್ರೆಡಿಷನಲ್ ಹೀಲಿಂಗ್ ಪ್ರೈವೇಟ್ ಲಿಮಿಟೆಡ್‌ನವರು ಇಂದಿರಾನಗರದಲ್ಲಿ ಈ `ಅರ್ಥ್' ಕೇಂದ್ರವನ್ನು ಆರಂಭಿಸಿದ್ದಾರೆ.

ಆರೋಗ್ಯವಂತರ ಸ್ವಾಸ್ಥ್ಯವನ್ನು ಕಾಪಾಡುವುದು ಮತ್ತು ರೋಗಿಗಳ ಕಾಯಿಲೆಯನ್ನು ದೂರ ಮಾಡುವುದು ನಮ್ಮ ಉದ್ದೇಶವೆಂದು ಸಂಸ್ಥೆಯ ಆಯುರ್ವೇದ ಪರಿಣಿತರಾದ ಡಾ. ಪ್ರಶಾಂತ್ ಮತ್ತು ಡಾ. ಸಂಜಯ್ ಶರ್ಮಾ ಹೇಳುತ್ತಾರೆ.,

ಆಯುರ್ವೇದ ಕೇವಲ ವೈದ್ಯ ಪದ್ಧತಿ ಮಾತ್ರವಲ್ಲ, ಅದು ಜೀವನ ವಿಧಾನ ಎಂದು ಹೇಳುವ ಈ ಇಬ್ಬರು ವೈದ್ಯರ ಕಲ್ಪನೆಯ ಕೂಸಾದ `ಅರ್ಥ್'ನಲ್ಲಿ, ಇಂದಿನ ಮಾಹಿತಿ ತಂತ್ರಜ್ಞಾನ ಪರಿಣಿತರು ಎದುರಿಸುತ್ತಿರುವ ಮಾನಸಿಕ ಒತ್ತಡವನ್ನು ನಿವಾರಿಸಲು ವಿಶೇಷ ಯೋಜನೆ ಇದೆ.

ಐಟಿ ಪರಿಣಿತರಿಗಾಗಿ 1500ರಿಂದ 15,000ರೂ.ಗಳವರೆಗೆ ವಿವಿಧ ಯೋಜನೆಗಳಿವೆ. ಮಾಹಿತಿ ತಂತ್ರಜ್ಞಾನ ಸಂಬಂಧಿ ಕೆಲಸ ಮಾಡುವವರಿಗೆ ಕಣ್ಣಿನ ಮತ್ತು ಬೆನ್ನಿನ ತೊಂದರೆಗಳು ಎದುರಾಗುವುದು ಸಾಮಾನ್ಯವಾಗಿದೆ. ಹಲವಾರು ಮಾಹಿತಿ ತಂತ್ರಜ್ಞಾನ ಪರಿಣಿತರ ತೊಂದರೆಗಳನ್ನು ಯಶಸ್ವಿಯಾಗಿ ನಿವಾರಿಸಲಾಗಿದೆ ಎಂದು ಸಂಸ್ಥೆ ಹೇಳಿಕೊಂಡಿದೆ.

ಶಾಂತ ವಸತಿ ಪ್ರದೇಶದಲ್ಲಿ ಸ್ಥಿತವಾಗಿರುವ `ಅರ್ಥ್'ನಲ್ಲಿ ಪ್ರವೇಶ ಪಡೆಯಲು ಅರ್ಥ್, 12ನೇ ಮುಖ್ಯ ರಸ್ತೆ, ಎಚ್‌ಎಎಲ್ ಎರಡನೇ ಹಂತ, ಇಂದಿರಾನಗರ ಇಲ್ಲಿ ಖುದ್ದಾಗಿ ಅಥವಾ ದೂರವಾಣಿ ಸಂಖ್ಯೆಗಳಾದ :5288630, 5256455ರಲ್ಲಿ ಸಂಪರ್ಕಿಸಬಹುದಾಗಿದೆ.

ಈ ಕೇಂದ್ರದಲ್ಲಿ ವಿವಿಧ ಉದ್ದೇಶಗಳಿಗಾಗಿಯೇ ಹಲವಾರು ಕೋಣೆಗಳಿವೆ. ಸಂಸ್ಥೆಯ ಪ್ರಕಾರಕೀಲು ನೋವು, ಉಸಿರಾಟದ ತೊಂದರೆ, ಬಂಜೆತನ, ತಲೆನೋವು, ಪೈಲ್ಸ್ ಮುಂತಾದ ಹಲವಾರು ತೊಂದರೆಗಳಿಗೆ ಪ್ರಾಕೃತಿಕ ರೀತಿಯಲ್ಲಿ ಉಪಶಮನವನ್ನುಇಲ್ಲಿ ನೀಡಲಾಗುತ್ತಿದೆ. ತಾಯಿ ಮತ್ತು ನವಜಾತ ಶಿಶುವಿನ ಆರೈಕೆಗಾಗಿ ಸಹ ವಿಶೇಷ ಯೋಜನೆ ಇದೆ.